ಈ ಕೊನೆಯ ಶ್ಲೋಕಕ್ಕೆ ಸ್ವಾಮಿ ರಂಗನಾಥಾನಂದಜಿಯವರ ವ್ಯಾಖ್ಯಾನ ತುಂಬ ಸ್ವಾರಸ್ಯಕರವಾಗಿದೆ:

''*ಯತ್ರ ಯೋಗೇಶ್ವರಃ ಕೃಷ್ಣಃ*, 'ಎಲ್ಲಿ ಯೋಗೇಶ್ವರನಾದ ಶ್ರೀಕೃಷ್ಣನು ಇರುವನೋ,' *ಯತ್ರ ಪಾರ್ಥೋ ಧನುರ್ಧರಃ*, 'ಎಲ್ಲಿ ಧನುರ್ಧಾರಿಯಾದ ಅರ್ಜುನನಿರುವನೋ,' ಧನುರ್ವಿದ್ಯಾ ಪಾರಂಗತನಾಗಿದ್ದ ಅರ್ಜುನನು ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದ. ಅದರ ಅರ್ಥ ಅವನು ಕ್ರಿಯಾಶೀಲನಾದ ಮನುಷ್ಯ ಎಂದು. ಶ್ರೀಕೃಷ್ಣನು ತುಂಬ ಶಾಂತ ವ್ಯಕ್ತಿ; ವಿವೇಚನೆ ತುಂಬಿದವನು; ಮಾನವರೆಲ್ಲರ ಬಗ್ಗೆ ಅನುಕಂಪದಿಂದ ಕೂಡಿದವನು, ಮತ್ತು ಮಹಾಚಾರ್ಯನು. ತತ್ರ, 'ಆ ಜಾಗದಲ್ಲಿ,' ಎಂದರೆ ಆ ಕುಟುಂಬ ದಲ್ಲಿ, ಆ ಸಮಾಜದಲ್ಲಿ, ಆ ರಾಷ್ಟ್ರದಲ್ಲಿ; ಯಾವ ಅನುಗ್ರಹವನ್ನು ಕಾಣುವೆವು? *ಶ್ರೀ*, 'ಅಭಿವೃದ್ಧಿಶೀಲತೆ.' *ಶ್ರೀ*ಯ ವಿರುದ್ಧ ಪದ ವೇನು? ಬಡತನ, ದುಃಖದ ಬದುಕು – ಇದೆಲ್ಲ *ಅ-ಶ್ರೀ*. ಶ್ರೀರಾಮಕೃಷ್ಣರು ಹೇಳುತ್ತಿದ್ದರು: 'ಪ್ರತಿಯೊಂದು ಮನೆಯ ಮುಂಭಾಗದಲ್ಲಿ ಒಂದು ದೀಪ ಉರಿಯುತ್ತಿರಬೇಕು' ಎಂದು. ಅದು ಮನೆಯಲ್ಲಿ *ಶ್ರೀ* ಇರುವ ದ್ಯೋತಕ. ದೀಪ ಬೆಳಗುತ್ತಿಲ್ಲ ದಿದ್ದರೆ, ಆ ಮನೆಯಲ್ಲಿ *ಅ-ಶ್ರೀ* ಇದೆ ಎಂದರ್ಥ. ಹೀಗೆ, ಸಾಮಾನ್ಯ ವಾಗಿ ನಮ್ಮ ಮನೆಗಳಲ್ಲಿ ನಾವು ಒಂದು ನಂದಾದೀಪವನ್ನಾದರೂ ಉರಿಸುತ್ತಿರುತ್ತೇವೆ. ಹೀಗೆ, ಒಬ್ಬ ವ್ಯಕ್ತಿಗೆ, ಒಂದು ಸಮಾಜಕ್ಕೆ, ಒಂದು ರಾಷ್ಟ್ರಕ್ಕೆ, ಶ್ರೀಕೃಷ್ಣಾರ್ಜುನರ ಒಗ್ಗೂಡಿದ ಶಕ್ತಿಯಿಂದಾಗಿ ಬರಲಿರುವ ಮೊಟ್ಟಮೊದಲ ಅನುಗ್ರಹ ಎಂದರೆ, ಈ *ಶ್ರೀ*. ಅನಂತರ ಬರುವುದು ಎರಡನೆಯ ಅನುಗ್ರಹ.

''*ವಿಜಯಃ*, 'ಯಶಸ್ಸು'; ನಾವು ಯಾವುದನ್ನಾದರೂ ವಹಿಸಿ ಕೊಂಡು ಕೆಲಸ ಮಾಡಬೇಕು. ಆಗ ಅದರಲ್ಲಿ ಯಶಸ್ವಿಯಾಗುವೆವು. ಇಲ್ಲವಾದರೆ, ಈ ಶಕ್ತಿ ಅಲ್ಲಿಲ್ಲದಿದ್ದರೆ, ನಾವು ಕೆಲಸ ಮಾಡುತ್ತಲೇ ಹೋಗುವೆವು; ಆದರೆ ಯಾವುದರಲ್ಲೂ ಯಶಸ್ಸನ್ನು ಕಾಣಲಾರೆವು. ಆದರೆ ಈ ಕೃಷ್ಣಾರ್ಜುನರ ಒಗ್ಗೂಡಿದ ಶಕ್ತಿಯು ಪ್ರತಿಯೊಂದು ಕೆಲಸದಲ್ಲಿಯೂ ಯಶಸ್ಸು ಲಭಿಸುವಂತೆ ಮಾಡುವುದು.

''ಮೂರನೆಯ ಅನುಗ್ರಹ *ಭೂತಿ*, 'ಯೋಗಕ್ಷೇಮ'; ಎಲ್ಲೆ ಲ್ಲಿಯೂ ಸುಖಸಂತೃಪ್ತಿಗಳು ತಾಂಡವವಾಡುತ್ತಿರುವುವು. ನಾಲ್ಕ ನೆಯ *ಧ್ರುವಾ ನೀತಿಃ*, ಸಮಾಜದಲ್ಲಿ ಯಾವಾಗಲೂ ನೆಲೆಸಿರುವ 'ಋಜುತ್ವ ಹಾಗೂ ಸ್ಥಿರವಾದ ನ್ಯಾಯ.' ಹೀಗೆ, *ಶ್ರೀ*, *ವಿಜಯಃ*, *ಭೂತಿಃ* ಮತ್ತು *ಧ್ರುವಾ ನೀತಿಃ* – ನಾಲ್ಕೂ ಸಂಗತಿಗಳನ್ನಿಲ್ಲಿ ಹೇಳಲಾಗಿದೆ: ಆರ್ಥಿಕ ಅಭಿವೃದ್ಧಿ, ಕೈಗೊಂಡ ಕೆಲಸಗಳಲ್ಲಿ ಯಶಸ್ಸು, ರಾಷ್ಟ್ರದ ಉತ್ತಮ ಹಿತರಕ್ಷಣೆ ಮತ್ತು ಕೊನೆಯದಾಗಿ, ಎಚ್ಚೆತ್ತಿರುವ ನೈತಿಕ ಪ್ರಜ್ಞೆ.

''ಶ್ರೀಕೃಷ್ಣನ ಹಾಗೂ ಅರ್ಜುನನ ಶಕ್ತಿಗಳೆರಡೂ ಸಮಾಜದಲ್ಲಿ ಒಗ್ಗೂಡಬೇಕು. ಸಾಧಾರಣವಾಗಿ ದೃಷ್ಟಿಶಕ್ತಿ, ಕ್ರಿಯಾಶಕ್ತಿ ಎಂದು ನಾವೆನ್ನಬಹುದು. ಇವೆರಡೂ ಒಟ್ಟಿಗೆ ಮುನ್ನಡೆಯಬೇಕು. ಮಹಾ ಭಾರತ ಯುದ್ಧದಲ್ಲಿ ಶ್ರೀಕೃಷ್ಣನೆಂದಿಗೂ ಕ್ರಿಯಾಶೀಲತೆಯನ್ನು ವಿಜೃಂಭಿಸಿದ ಮನುಷ್ಯನಾಗಿರಲಿಲ್ಲ. ಅವನು ಕೇವಲ ರಥದ ಸಾರಥಿಯಾಗಿದ್ದ. ಅವನು ಯುದ್ಧದಲ್ಲಿ ಭಾಗವಹಿಸಲೇ ಇಲ್ಲ. ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿರುವ ಪ್ರಾರಂಭಿಕ ಹಂತದಲ್ಲಿ, ದುರ್ಯೋಧನ ಅರ್ಜುನ ಇಬ್ಬರೂ ಶ್ರೀಕೃಷ್ಣನ ಬಳಿಗೆ ಸಹಾಯ ಕೇಳುವುದಕ್ಕಾಗಿ ಬರುವುದನ್ನು ನೋಡುವೆವು. ಶ್ರೀಕೃಷ್ಣನೆನ್ನುತ್ತಾನೆ, 'ಬೇಕಾದಷ್ಟು ಸೈನ್ಯಗಳನ್ನು ಕೊಡಬಲ್ಲೆ, ಅಥವಾ ನನ್ನನ್ನು ನಾನೇ ಕೊಟ್ಟುಕೊಳ್ಳಬಲ್ಲೆ. ನಿನಗೇನು ಬೇಕು?' ದುರ್ಯೋಧನನೆನ್ನುತ್ತಾನೆ, 'ನನಗೆ ನಿನ್ನ ಸೈನ್ಯಗಳು ಬೇಕು; ನೀನು ಬೇಡ.' ಹೀಗೆ, ಅವನು ಶ್ರೀಕೃಷ್ಣನ ಸೈನ್ಯಗಳನ್ನು ತೆಗೆದುಕೊಂಡು ಹೋಗುತ್ತಾನೆ. ಅರ್ಜು ನನು, 'ನನಗೆ ಸೈನ್ಯ ಬೇಡ; ನೀನೊಬ್ಬನು ನನ್ನ ಕಡೆಗಿದ್ದರೆ ಸಾಕು. ನನ್ನ ಸಾರಥಿಯಾಗು. ನೀನು ಯುದ್ಧಮಾಡಬೇಕಾದುದೂ ಇಲ್ಲ' ಎನ್ನುತ್ತಾನೆ. ಮಹಾಭಾರತ ಯುದ್ಧದಲ್ಲಿ ಅದೇ ಶ್ರೀಕೃಷ್ಣನ ಸ್ಥಾನ ಮಾನ. ಅವನು ಕೇವಲ ಅರ್ಜುನನಿಗೆ ಮಾರ್ಗದರ್ಶನ ಮಾಡು ತ್ತಿದ್ದವನು. ಹೀಗೆ, ದೂರದೃಷ್ಟಿ, ಮುಂದಾಲೋಚನೆ ಎರಡೂ ಇದ್ದ ಶ್ರೀಕೃಷ್ಣ ಹಾಗೂ ಪ್ರಚಂಡ ಕ್ರಿಯಾಶೀಲತೆಯಿದ್ದ ವೀರ ಅರ್ಜುನ ಇವರಿಬ್ಬರ ಶಕ್ತಿಗಳೂ ಒಟ್ಟಾಗಿ ಸೇರುವ ಯಾವುದೇ ದೇಶಕ್ಕೆ *ಶ್ರೀ*, *ವಿಜಯಃ*, *ಭೂತಿಃ* ಮತ್ತು *ಧ್ರುವಾ ನೀತಿಃ* ಎಂಬ ಅನುಗ್ರಹಗಳು ಸಿದ್ಧಿಸುವುದು ನಿಶ್ಚಿತ. ಇದೇ ಮಾನವ ಜನಾಂಗಕ್ಕೆ ಗೀತೆಯ ಸಂದೇಶ.'' ***(ಭಗವದ್ಗೀತೆಯ ವಿಶ್ವಸಂದೇಶ** ಭಾಗ ೩, ಸ್ವಾಮಿ ರಂಗನಾಥಾನಂದ, ೨೦೧೬, ಪು.೪೩೭-೪೦, ಪ್ರ : ಶ್ರೀರಾಮಕೃಷ್ಣ ಆಶ್ರಮ, ಮೈಸೂರು)*

***(ಸಮಾಪ್ತಿ)*** ✳

## ಕೃತಜ್ಞತೆಗಳು

೨೦೧೧ ಡಿಸೆಂಬರ್ ಸಂಚಿಕೆಯಿಂದ ಆರಂಭಗೊಂಡು, ಒಟ್ಟು ೪೦ ಕಂತುಗಳಲ್ಲಿ ಪ್ರಕಟವಾದ 'ಭಗವದ್ಗೀತಾ ತತ್ತ್ವ ಸೌರಭ' ಎಂಬ ಈ ಗೀತಾತತ್ತ್ವ ಚಿಂತನ ಮಾಲಿಕೆಯು ಈ ಸಂಚಿಕೆಯಲ್ಲಿ ಸಮಾಪ್ತಿಗೊಳ್ಳುತ್ತಿದೆ. ಬಗೆದಷ್ಟೂ ಆಳಕ್ಕೆ ಹೋಗುವ, ಚಿಂತಿಸಿದಷ್ಟೂ ಅಗಾಧವೆನ್ನಿಸುತ್ತ ಹೋಗುವ ಮಹಾನ್ ಗ್ರಂಥ ಭಗವದ್ಗೀತೆಯ ಮೇಲೆ ಪೂಜ್ಯ ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್ ಅವರು ಇಲ್ಲಿ ವಿನೂತನ ವ್ಯಾಖ್ಯಾನವನ್ನೇ ಮಾಡಿದ್ದಾರೆ. ಪ್ರಾಚೀನ ಭಾವನೆ, ಆದರ್ಶಗಳನ್ನು ಆಧುನಿಕ ಜನಜೀವನಕ್ಕೆ ಅನ್ವಯವಾಗು ವಂತೆ, ಸಾರ್ವಕಾಲಿಕ ತತ್ತ್ವಗಳನ್ನು ಸಮಕಾಲೀನ ಸಮಾ ಜಕ್ಕೆ ಸೂಕ್ತವೆನ್ನಿಸುವಂತೆ ಇಲ್ಲಿ ನಿರೂಪಿಸಲಾಗಿದೆ. ಇದು ವರೆಗೆ 'ವಿವೇಕಪ್ರಭ'ದಲ್ಲಿ ಮೂಡಿಬಂದ ಈ ಚಿಂತನೆಗಳನ್ನು ನಿರಂತರ ನಮಗೆ ಒದಗಿಸಿಕೊಟ್ಟ ಪೂಜ್ಯ ಲೇಖಕರಿಗೂ, ಸಮಾನವಾಗಿ ಪ್ರತಿಕ್ರಿಯೆ ಹಾಗೂ ಮೆಚ್ಚುಗೆಗಳನ್ನು ವ್ಯಕ್ತ ಪಡಿಸಿದ ಓದುಗರಿಗೂ ಕೃತಜ್ಞತೆ ಸಲ್ಲಿಸುತ್ತಿದ್ದೇವೆ.

***-ಸಂ***